**ದಿ: 27-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲು: ಶ್ರೀ ಬಿ.ಎಸ್.ಡಿ. ವಕೀಲರಿಂದ: -**

1. ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನೂ ವಿಷಯಗಳು ಬರೆದಿದೆ ಎಂದು ನನಗೆ ಗೊತ್ತಿರುತ್ತದೆ ನಾನು ಹೇಳಿ ಬರೆಸಿರುತ್ತೇನೆ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದ ಪ್ಯಾರಾ ನಂಬರ್ 12 ಮತ್ತು ವಾದ ಪತ್ರದ ಪ್ಯಾರಾ ನಂಬರ್ 6 ರಿಂದ 9 ರಲ್ಲಿ ಪ್ರತಿವಾದಿಯರು ಅಸಲು ದಾವಾ ಸಂಖ್ಯೆ 95/2015 ನ್ನು ಶಾಶ್ವತ ತಡೆಯಾಜ್ಞೆಗಾಗಿ ಸಲ್ಲಿಸಿದ್ದು ಅದರಲ್ಲಿ ಅವರಿಗೆ ತಾತ್ಕಾಲಿಕ ತಡೆಯಾಜ್ಞೆ ಆದೇಶ ಆಗಿರುತ್ತದೆ ಎಂದು ಮತ್ತು ಅವರು ದಾವಾ ಜಮೀನಿನಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ ಎಂದು ಬರೆಸಿದ್ದಿರಾ ಎಂದರೆ ಸಾಕ್ಷಿಯು ಸುಳ್ಳು ಇದೆ ಎನ್ನುತ್ತಾರೆ. ಅಸಲು ದಾವಾ ಸಂಖ್ಯೆ 95/2015 ರಲ್ಲಿ ದಿನಾಂಕ: 19-01-2022 ರಂದು ತೀರ್ಪು ಡಿಕ್ರಿಯಾಗಿರುತ್ತದೆ ಎಂದರೆ ಸರಿಯಲ್ಲ. ಆಮಾತೆಪ್ಪ ಎಂಬುವವರು ನನಗೆ ಮಗನಾಗಬೇಕು. ಅಸಲು ದಾವಾ ಸಂಖ್ಯೆ 95/2015 ರಲ್ಲಿ ನಿಮ್ಮ ಮಗ ಅಮಾತೆಪ್ಪ ಪ್ರತಿವಾದಿ ಸಂಖ್ಯೆ 4 ಎಂದು ಪಕ್ಷಗಾರರಾಗಿದ್ದಾರೆ ಎಂದರೆ ಸರಿಯಲ್ಲ. ಸದರಿ ತೀರ್ಪನ್ನು ಪ್ರಶ್ನೆ ಮಾಡಿ ನಿಮ್ಮ ಮಗ ಮತ್ತು ಕೃಷ್ಣಪ್ಪ ಇವರು ಮೇಲ್ಮನವಿ ಸಲ್ಲಿಸಿದ್ದು ಸದರಿ ಮೇಲ್ಮನವಿ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ತೀರ್ಪು ಆದ ನಂತರ ಖಾಸಿಂಸಾಬನ ಮಗ ಗುಲಾಂನಬಿ ಮತ್ತು ಅವರ ಮಕ್ಕಳು ದಾವಾ ಜಮೀನಿನಲ್ಲಿ ನ್ಯಾಯಾಲಯದ ಪೋಲಿಸ್ ರಕ್ಷಣೆಯ ಆದೇಶದ ಮೇರೆಗೆ ಮನೆಯನ್ನು ಕಟ್ಟಿಕೊಂಡು ಅಲ್ಲಿ ವಾಸ ಮಾಡುತ್ತಿದ್ದಾರೆಂದರೆ ಸುಳ್ಳು.

2. ದಾವಾ ಜಮೀನಿನ ಚಕ್ ಬಂದಿ ಪೂರ್ವಕ್ಕೆ ಭಗವಂತ್ರಾಯ ಇವರ ಜಮೀನು, ಪಶ್ಚಿಮ ದಿಕ್ಕಿಗೆ ಗ್ಯಾಸ್ ಸಿಲೆಂಡರ್ ಅಂಗಡಿ ಇರುತ್ತದೆ, ಉತ್ತರ ಕ್ಕೆ - ಡಿಪೋದವರಿಗೆ ಸೇರಿದ ಜಾಗ ಇರುತ್ತದೆ, ದಕ್ಷಿಣ ದಿಕ್ಕಿಗೆ ದಾರಿ ಇರುತ್ತದೆ. ಈ ಚವಕ್ ಬಂದಿಯ ಮದ್ಯದಲ್ಲಿ ಯಾರ ಯಾರ ಮನೆಗಳು ಇವೆ ಎಂದರೆ ಸಾಕ್ಷಿಯು ಕೃಷ್ಣಪ್ಪ, ರಾಮಣ್ಣ, ಮತ್ತು ಈರಣ್ಣ ಇವರ ಮನೆಗಳಿದ್ದು, ಈರಣ್ಣ ನು ತೀರಿಕೊಂಡಿದ್ದು ಇತನ ಹೆಂಡತಿ ಇರುತ್ತಾಳೆ. ನಾನು ಹೇಳಿದ ಚಕ್ ಬಂದಿಯ ಮದ್ಯದಲ್ಲಿ ಅಮರಣ್ಣಗೌಡ ಇವರ ಮನೆ ಬರುತ್ತದೆ. ಮೇಲೆ ಹೇಳಿದ ಚಕ್

ಬಂದಿ ಮಧ್ಯದಲ್ಲಿ ಇಮಾಮಸಾಬ ಮತ್ತು ತಮ್ಮಣ್ಣ ಇವರ ಜಾಗ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅಮರಣ್ಣಗೌಡ ನ ಮನೆಯ ಪೂರ್ವ ದಿಕ್ಕಿಗೆ ಅವರ ಮಗ ಶರಣಗೌಡನ ಮನೆ ಇರುತ್ತದೆ. ಅಮರಣ್ಣಗೌಡ ಮತ್ತು ಶರಣಗೌಡನ ಮನೆಗೆ ಹೊಂದಿಕೊಂಡು ಪೂರ್ವ ದಿಕ್ಕಿಗೆ ಖಾಸಿಂಸಾಬ ಮತ್ತು ಬಾವಾಸಾಬ ಇವರು ಕಟ್ಟಿಕೊಂಡ ಮನೆಗಳು ಬರುತ್ತವೆ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ.

3. ಅಸಲು ದಾವಾ ನಂಬರ್ 212/2016 ರಂತೆ ನೀವು ಮತ್ತು ಚಂದ್ರಮ್ಮ ಕೂಡಿ ಬಾವಾಸಾಬ, ಕಾಸಿಂಸಾಬ, ಹುಸೇನಸಾಬ ಮತ್ತು ಫಾತಿಮಾ ಇವರ ಮೇಲೆ ದಾವಾ ಆಸ್ತಿಯ ಚಕ್ ಬಂದಿಯನ್ನು ನಮೂದಿಸಿ ಅದನ್ನು ಪ್ಲಾಟ್ ಗಳು ಎಂದು ತೋರಿಸಿ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ. ಸದರಿ ದಾವಾ ವಜಾ ಆಗಿರುತ್ತದೆ ಈಗ ದಾವಾ ಆಸ್ತಿಯ ಪಹಣಿ ಸೃಷ್ಟಿ ಮಾಡಿಕೊಂಡು ಈ ದಾವೆಯನ್ನು ಈ ನ್ಯಾಯಾಲಯದಲ್ಲಿ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನೀವು ದಾವಾ ಆಸ್ತಿಗಳ ಪಹಣಿಯನ್ನು ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಸಾಗುವಳಿ ಭೂಮಿ ಇರುವುದಿಲ್ಲ, ನೀವು ಮಾಲೀಕರು ಮತ್ತು ಕಬ್ಜಾದಾರರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಜಮೀನು ಸರ್ವೆ ಮಾಡಿಸಿದ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಾವಾ ಜಮೀನನ್ನು ನೀವು ಸರ್ವೆ ಮಾಡಿಸಿಲ್ಲ, ಮತ್ತು ಸರ್ವೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಶಿವನಗೌಡನಿಗೆ ಹೊಲವನ್ನು ಯಾರು ಕೊಟ್ಟಿದ್ದರು ಎಂದರೆ ಸಾಕ್ಷಿಯು ಸೇಂದಿ ಡಿಪೋದವರಿಗೆ ನಾವು ಹೊಲವನ್ನು ಕೊಟ್ಟಿದ್ದು ಅವರು ಶಿವನಗೌಡನಿಗೆ ಕೊಟ್ಟಿದ್ದಾರೆ ಎನ್ನುತ್ತಾರೆ. ಸೇಂಧಿ ಡಿಪೋದವರಿಗೆ ನೀವು ಜಾಗ ಕೊಟ್ಟಿರುವುದರಿಂದ ಅಲ್ಲಿ ನಿಮಗೆ ಯಾವುದೇ ಜಮೀನು ಉಳಿದಿರುವುದಿಲ್ಲ ಎಂದರೆ ಸರಿಯಲ್ಲ. ನೀವು ನ್ಯಾಯಾಲಯಕ್ಕೆ ಸುಳ್ಳು ದಾಖಲಾತಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**
ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ